ರಸ್ತೆಯ ನಿರ್ವಹಣೆಯನ್ನು ವಹಿಸಿಕೊಂಡಿದ್ದು ಈವರೆವಿಗೂ ಲಭ್ಯವಿರುವ ಅನುದಾನಕ್ಕನುಗುಣವಾಗಿ ರಸ್ತೆ ನಿರ್ವಹಣೆ ಕೆಲಸಗಳನ್ನು ಮಾಡಲಾಗಿರುತ್ತದೆ. ಹೇಮಾವತಿ ಅಣೆಕಟ್ಟು ಪೂರ್ಣಗೊಂಡಿರುವುದರಿಂದ, ಸದರಿ ರಸ್ತೆಯನ್ನು ಲೋಕೋಪಯೋಗಿ ಇಲಾಖೆಗೆ ಹಸ್ತಾಂತರಿಸಿಕೊಳ್ಳಬೇಕೆಂದು ಲೋಕೋಪಯೋಗಿ ಇಲಾಖೆಯೊಡನೆ ಪ್ರಸ್ತಾಪಿಸಲಾಗುತ್ತಿದೆ. ಲೋಕೋಪಯೋಗಿ ಇಲಾಖೆಗೆ ಹಸ್ತಾಂತರಿಸುವವರೆಗೂ ಅತ್ಯವಶ್ಯಕ ದುರಸ್ತಿ ಕಾಮಗಾರಿಗಳನ್ನು ಮಾಡಲು ನೀರಾವರಿ ಇಲಾಖೆಯು ಕ್ರಮ ತೆಗೆದುಕೊಳ್ಳಲಾಗುವುದು.

ಯಗಚಿ ಡ್ಯಾನಿಂದ ವ್ಯವಸಾಯಕ್ಕೆ ನೀರು ಪೂರ್ಯೆಕೆ

796 - ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೇಲೂರು ತಾಲ್ಲೂಕಿನಲ್ಲಿ ನಿರ್ಮಾಣವಾಗುತ್ತಿರುವ ಯಗಚಿ ಡ್ಯಾಂನಿಂದ (ಇತ್ತೀಚಿನ ಗೇಜ್‌ನಿಂದ ಪರಿಶೀಲನೆಯ ನಂತರ) ವ್ಯವಸಾಯಕ್ಕೆ ಲಭ್ಯವಿರುವ ನೀರಿನ ಪ್ರಮಾಣವೆಷ್ಟು?

ಆ) ಈ ಯೋಜನೆಯಿಂದ ತರಿ ಬೆಳೆಗಳಾದ ಕಬ್ಬು, ಭತ್ತ ಮತ್ತು ಅರೆನೀರಾವರಿ ಬೆಳೆಗಳಾದ ರಾಗಿ, ಜೋಳ ವಗೈರೆ ಖುಷ್ಕಿ ಬೆಳೆಗಳಿಗೆ ಲಭ್ಯವಿರುವ ನೀರಿನಿಂದ ಎಷ್ಟೆಷ್ಟು ಎಕರೆಗೆ ನೀರು ಒದಗಿಸಲು ಯೋಜಿಸಲಾಗಿದೆ.

ಇ) ಈ ಯೋಜನೆಯಿಂದ ಚಿಕ್ಕಮಗಳೂರು ಮತ್ತು ಬೇಲೂರು ಪಟ್ಟಣಗಳಿಗೆ ಕುಡಿಯುವ ನೀರು ಒದಗಿಸಲು ಸರ್ಕಾರ ಯೋಜಿಸಿದೆಯೇ?

ಈ) ಹಾಸನ ವಿಧಾನಸಭಾಕ್ಷೇತ್ರ ಬರಪೀಡಿತ ಪ್ರದೇಶಕ್ಕೆ ಶಾಶ್ವತ ಪರಿಹಾರ ಕ್ರಮವಾಗಿ ಈ ಯೋಜನೆಯಿಂದ ನೀರು ಒದಗಿಸಲು ಕಾರ್ಯಕ್ರಮ ರೂಪಿಸಲು ಸರ್ಕಾರ ಕ್ರಮ ತೆಗೆದುಕೊಂಡಿರುವುದು ನಿಜವಲ್ಲವೇ? (ವಿವರ ಕೊಡಿ)

ಶ್ರೀ ಹೆಚ್.ಕೆ. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) :

ಅ) ಯಗಚಿ ಯೋಜನೆಯ ಪರಿಷ್ಕೃತ ವಾಟರ್ ಪ್ಲಾನಿಂಗ್ ಪರಿಶೀಲನೆಯಲ್ಲಿದ್ದು, ಅಂತಿಮಗೊಂಡ ನಂತರ ನಿರ್ದಿಷ್ಟವಾಗಿ ನೀರಿನ ಪ್ರಮಾಣ ತಿಳಿಯುವುದು.

ಆ) ಪರಿಷ್ಕೃತ ವಾಟರ್ ಪ್ಲಾನಿಂಗನ್ನು ಅಂತಿಮಗೊಳಿಸಿದ ನಂತರ ವಿವಿಧ ಬೆಳೆಗಳಿಗೆ ಲಭ್ಯವಾಗುವ ನೀರಿನ ಪ್ರಮಾಣಕ್ಕನುಗುಣವಾಗಿ ಎಷ್ಟೆಷ್ಟು ಎಕರೆಗಳಿಗೆ ನೀರು ಒದಗಿಸುವ ಬಗ್ಗೆ ಯೋಜಿಸಲಾಗುವುದು.

ಇ) ಹೌದು.

ಈ) ಹೌದು. ಆಂಜನೇಯಪುರ ಏತ ನೀರಾವರಿ ಯೋಜನೆಯ ಮುಖಾಂತರ ನೀರು ಒದಗಿಸಲು ಸರ್ಕಾರವು ಕ್ರಮ ತೆಗೆದುಕೊಂಡಿರುತ್ತದೆ.